


**ಮಾಹಿತಿಪೂರ್ಣ**
'ತೆರೆದ ಮನಸ್ಸಿನ ಮುಕ್ತ ಪರೀಕ್ಷೆ', ಎಂ. ಅಬ್ದುಲ್ ರೆಹಮಾನ್ ಪಾಷ ಅವರ ಮುಖಪುಟ ಲೇಖನ (ಸುಧಾ ಜುಲೈ 26) ಮಾಹಿತಿ ಪೂರ್ಣವಾಗಿದೆ. ಹೊಸ ಬದಲಾವಣೆಯನ್ನು ತರುವಾಗ ಅದಕ್ಕೆ ಅಡಚಣೆ, ಅನನುಕೂಲ, ವಿರೋಧ ಇದ್ದೇ ಇರುತ್ತದೆ. ನಂತರ ಜನ ಅದಕ್ಕೆ ಒಗ್ಗಿ ಹೋಗುತ್ತಾರೆ. ಶೇಷನ್ ಎಲೆಕ್ಷನ್ ಕಾರ್ಡ್, ನಂದನ್ ನೀಲೇಕಣಿ ಆಧಾರ್ ಕಾರ್ಡ್, ಮೋದಿ ಸರ್ಕಾರ ಜಿ.ಎಸ್.ಟಿ. ತಂದಾಗಲೂ ವಿರೋಧಗಳು ಬಂದವು.

—ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಕೊಹಿಮ ಬಸರಕೋಡು, ಶೋಭಾ ಮುಕುಂದ ಕಲಬುರಗಿ, ಮಧುರ ಸುಬ್ರಹ್ಮಣ್ಣ ಬೆಂಗಳೂರು, ಗಾಣಧಾಳು ರಾಮಣ್ಣ ಬೆಂಗಳೂರು

**ಉಮರ ಸಂದೇಶ**
'ವಿಚಾರ ಲಹರಿ'ಯಲ್ಲಿ ಉಮರ ಸಂದೇಶ' (ಅಮೃತ ಮತಿ) ಬರಹ ಅದ್ಭುತ.

—ರುಕ್ಮಿಣಿ ಕೃ ದೇಶಪಾಂಡೆ ಗೋಕಾಕ, ಎಚ್.ಆನಂದಕುಮಾರ್ ಚಿತ್ರದುರ್ಗ

**ಓದಿ ಆಶ್ಚರ್ಯವಾಗಲಿಲ್ಲ**
'ನಿಮ್ಮೊಡನೆ'ಯಲ್ಲಿ 'ಇದು ಪರೀಕ್ಷಾ ಕ್ರಮವೆ?'(ಬಿ.ಎಂ.ಹನೀಫ್) ಬರಹ ವಿಚಾರಯುಕ್ತವಾದುದು. ಆದರೂ ಇದನ್ನು ಓದಿ ಆಶ್ಚರ್ಯವೇನೂ ಆಗಲಿಲ್ಲ. ಯುಜಿಸಿ, ಸಿಬಿಎಸ್‌ಸಿ ಮಾದರಿಯಲ್ಲೇ ಬಹುಪಾಲು ಸಂಸ್ಥೆಗಳು ಇರುವುದು.

—ಬಿ.ಚಂದ್ರೇಗೌಡ ಬೆಂಗಳೂರು, ಮೇ.ಗೋ.ಸುಬ್ಬಣ್ಣ ಮೇಗರವಳ್ಳಿ

**ಮುದ ನೀಡಿದ ಬೀಜದ ಕಲೆ**
'ಬೀಜದಿಂದ ಕಲೆ' (ಬೀರಣ್ಣ ನಾಯಕ ಮೊಗಟಾ) ಮುದ ನೀಡಿತು. ಬೀಜಗಳನ್ನು ಹದವಾಗಿ ಒಣಗಿಸಿ ರಂಗೋಲಿಗೆ ಬಳಸುವ ವಿದ್ಯಾ ಅವರ ಕಲೆಗಾರಿಕೆ ಕುತೂಹಲ ಉಂಟು ಮಾಡಿತು.

—ರತ್ನಾಕರ ಹೆಗಡೆಕಟ್ಟೆ, ಮೂಡಬಿದಿರೆ

**ಆರೋಗ್ಯ ಲೇಖನ**
'ವೃದ್ಧಾಪ್ಯದಲ್ಲಿ ಕಿವುಡುತನ' (ರಾಜೇಶ್ವರಿ ಜಯಕೃಷ್ಣ) ಲೇಖನ ವಿಚಾರಪೂರ್ಣ. ಕಿವಿ ಕೇಳಿಸದಿದ್ದರೆ ಸಮಾಜದಲ್ಲಿ, ಮನೆಯಲ್ಲಿ ನಗೆಪಾಟಲಿಗೀಡಾಗುತ್ತೇವೆ.

—ನೀಲಮ್ಮ ಕುಮಾರಪ್ಪ ಲಿಂಗಸುಗೂರು

**ಆರಿಸಿ ಉಣ್ಣುವ ಜನರಿಗೆ..**
ಆರೋಗ್ಯ ಲೇಖನ 'ಅಸಿಡಿಟಿಗೆ ಮದ್ದು' (ಸುಮಾ ಉಡುಪಿ) ಚಿಕ್ಕದಾಗಿದ್ದರೂ ಪ್ರಯೋಜನಕಾರಿಯಾಗಿದೆ. ಹೆಚ್ಚಿನ ಜನರನ್ನು ಕಾಡುವ ಅಸಿಡಿಟಿ ನಿವಾರಣೆಗೆ ಮನೆಮದ್ದು ಸಹಾಯವಾಗುತ್ತದೆ. ಅಸಿಡಿಟಿಗೆ ಹೆದರಿ ಉಣ್ಣುವ ಊಟದಲ್ಲಿ ಆರಿಸಿ, ಆರಿಸಿ ಉಣ್ಣುವ ಜನರು ಈ ಮನೆ ಮದ್ದುಗಳನ್ನು ದಿನವೂ ಬಳಸಲಿ.

—ರಾಜಶೇಖರ ಹಾದಿಮನಿ ಧಾರವಾಡ

**ಉಪಯುಕ್ತ ಮಾಹಿತಿ**
ಸೌಂದರ್ಯ ಲೇಖನ 'ತಲೆಕೂದಲ ಆರೈಕೆಗೆ ಜೆನೊ ಹೋಮಿಯೋಪತಿ' (ಉಮಾ ಅನಂತ್) ಪ್ರತಿಯೊಬ್ಬರೂ ಓದಿ ತಿಳಿದುಕೊಳ್ಳುವ ಉಪಯುಕ್ತ ಮಾಹಿತಿ ನೀಡಿದೆ. ಸೊಂಪಾದ ಕೂದಲಿಗಾಗಿ ಸೋಯ, ಮೊಟ್ಟೆ, ಪೌಷ್ಟಿಕಾಂಶ ಹೆಚ್ಚಿರುವ ಹಣ್ಣು ತರಕಾರಿಗಳ ಸೇವನೆ ಅತ್ಯವಶ್ಯಕ. ಸಂಗ್ರಹಯೋಗ್ಯ ಲೇಖನ.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು

**ರೋಚಕ ಲೇಖನ**
'ಥಾಯ್ಲೆಂಡಿನ ಸುರಂಗ ಮಥನ' (ಸರೋಜಾ ಪ್ರಕಾಶ) ಕುತೂಹಲಕಾರಿ. ಸರಾಗವಾಗಿ ಓದಿಸಿಕೊಂಡು ಹೋಗಿದ್ದಲ್ಲದೆ ಇಡೀ ಬರಹ ರೋಚಕ ಎನಿಸಿತು.

—ನಾರಾಯಣ ಯಾಜಿ ಶಿರಾಲಿ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**ಮಾನವೀಯತೆ**
ಗುಹೆಯಲ್ಲಿ ಸಿಲುಕಿರುವ ಮಕ್ಕಳನ್ನು ರಕ್ಷಿಸಲು ಧರ್ಮ ದೇಶ, ಭಾಷೆ, ಪಕ್ಷ, ರಾಜಕೀಯ ಎಲ್ಲವನ್ನೂ ಮರೆತು ಅಮೆರಿಕ, ಚೀನ, ಇಂಗ್ಲೆಂಡ್, ಆಸ್ಟ್ರೇಲಿಯಾದ ಮುಳುಗು ತಜ್ಞರು, ವೈದ್ಯರು ಒಂದಾಗಿ ಹೋರಾಡಿದ್ದು ನೋಡಿದರೆ ಮಾನವೀಯತೆಗೆ ಮೀರಿದ ಧರ್ಮವಿಲ್ಲ ಎಂಬುದು ನಿಜವಾಯಿತು.

—ವಿ.ಮಾಧವ ಶ್ಯಾನುಭಾಗ ಕುಂದಾಪುರ

**ಓಶ್‌ನಲ್ಲಿ ಸುತ್ತಾಡಿದ ಅನುಭವ**
ಪ್ರವಾಸ ಅಂಕಣದಲ್ಲಿ ಪ್ರಕಟವಾದ ಓಶ್! (ಗಣೇಶ್ ನಾಯಕ್) ರೋಮ್‌ನಷ್ಟೇ ಪ್ರಾಚೀನ ನಗರವಾದ ಓಶ್ ಮಧ್ಯ ಏಷ್ಯಾದಲ್ಲಿರುವ ಸುಂದರ ನಗರ. ಸಮ್ಮಿಶ್ರ ಸಂಸ್ಕೃತಿಯ ತೊಟ್ಟಿಲಾಗಿದ್ದು ಸಭ್ಯ ಜನರ ಸಮ್ಮೋಹಕ ನಗರವಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಚಿತ್ರ ಲೇಖನ ಓಶ್ ನಗರದಲ್ಲಿ ಸುತ್ತಾಡಿದ ಅನುಭವ ನೀಡಿತು.

—ವಿ. ಹೇಮಂತಕುಮಾರ ಬೆಂಗಳೂರು

**'ರಫಿ'ಯವರ ಸ್ಮರಣೆ**
'ಮತ್ತೆ ಮತ್ತೆ ನೆನಪಾಗುವ ಮಹಮ್ಮದ್ ರಫಿ' ಲೇಖನ (ಹೇಮಂತ ಕುಮಾರ ದೇಸಾಯಿ) ಬಹಳ ಆಪ್ತವಾಗಿದೆ. ಅನುಪಮ ಚಲನಚಿತ್ರ ಗಾಯಕ ರಫಿಯವರಿಗೆ ಹೃತ್ಪೂರ್ವಕ ನಮನ ಸಲ್ಲಿಸಬೇಕಾದದ್ದು ಸಾಧುವೇ. ಅವರ ಸಿರಿಕಂಠಕ್ಕೆ ಮಾರು ಹೋಗದವರೇ ಇಲ್ಲ.

—ಸುಂದರ್ ಬೆಂಗಳೂರು, ಮಹಾವೀರ ತ. ಉಪಾಧ್ಯೆ ಬೇಡಕಿಹಾಳ, ಎಚ್.ಎಸ್. ರಾಘವೇಂದ್ರ ಬೆಂಗಳೂರು, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ

## ಶಿಕಾಕು ಅವರ ಕೊನೆಯ ಸಂದೇಶ

'ಸುಧಾ' ವಾರಪತ್ರಿಕೆಗೆ ಇತ್ತೀಚಿನವರೆಗೂ 'ವಿಚಾರ ಲಹರಿ' ಅಂಕಣ ಬರೆಯುತ್ತಿದ್ದ ಶಿವರಾಮ ಕಾಡನಕುಪ್ಪೆ (ಶಿಕಾಕು) ಅವರು ಇತ್ತೀಚೆಗೆ ನಿಧನರಾದರು. ಅವರು 'ಸುಧಾ' ಸಂಪಾದಕೀಯ ವಿಭಾಗಕ್ಕೆ ಕಳಿಸಿದ ಕೊನೆಯ ವಾಟ್ಸಾಪ್ ಸಂದೇಶ ಇಲ್ಲಿದೆ.


ಪ್ರಿಯರೇ,

ದೇಹ ಸ್ಥಿತಿ ಹದಗೆಡುತ್ತಿದೆ,
ಚಿಂತನ ಶಕ್ತಿ ಕುಗ್ಗುತ್ತಿದೆ;
'ವಿಚಾರ ಲಹರಿ'ಗೆ ಬೇರೆ ವ್ಯವಸ್ಥೆ
ಮಾಡಿರಿ.

ನಿಮ್ಮ ಪ್ರೀತಿಗೆ ಧನ್ಯವಾದಗಳು.

ಬದುಕಿ ಬಂದರೆ
ಮತ್ತೆ ಬದುಕಿನ ಜೊತೆ ಗುದ್ದಾಡಿ
ಪ್ರೀತಿಸೋಣ

- ಶಿಕಾಕು
ರಾತ್ರಿ 9.00 ಗಂಟೆ
11.05.2018
11:07



